# ABCD
# ಸರ್ಕಾರಿ ಶಾಲೆಯಲ್ಲಿ ಇಂಗ್ಲಿಷ್ ಪಾಠ



**ರಸವತ್ತಾದ ಕಥೆಯ ಮೂಲಕ ನಗರದ ಈ ಮಹಿಳೆಯರು ಸರ್ಕಾರಿ ಶಾಲೆಯ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಿದ್ದಾರೆ. ಆಶಾ ಸಂಸ್ಥೆಯ ಈ ಸ್ವಯಂಸೇವಕಿಯರ ಸೇವೆ ನಿಜಕ್ಕೂ ಶ್ಲಾಘನೀಯ.**

ಚಿತ್ರ– ಲೇಖನ:
**ಮಂಜುಳಾ ರಾಜ್**



ಆಶಾ ಇನ್ಫಿನೈಟ್ ಸಂಸ್ಥೆಯ ಆಶಾ ಕಿರಣಗಳು





ಆಶಾ ಇನ್ಫಿನೈಟ್ ಸಂಸ್ಥೆಯ ಮೀರಾ ರಮಣ

'ಸರ್ಕಾರಿ ಶಾಲೆಗಳಲ್ಲಿ ಒಂದನೆಯ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಕಡ್ಡಾಯ ಮಾಡಬೇಕು' ಎಂದು ಮುಖ್ಯ ಮಂತ್ರಿಯವರು ಹೇಳಿಕೆ ಕೊಟ್ಟಿದ್ದಾರೆ. ಅನೇಕ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಕಲಿಸಬಲ್ಲ ಅರ್ಹ ಶಿಕ್ಷಕರಿಲ್ಲ. ಸರ್ಕಾರಿ ಶಾಲೆಯ ಮಕ್ಕಳಿಗೆ ಇಂಗ್ಲಿಷ್ ಭಾಷೆಯೆನ್ನುವುದು ಕಬ್ಬಿಣದ ಕಡಲೆ ಆಗಿದ್ದು ಮತ್ತು ಖಾಸಗಿ ಶಾಲೆಗಳ ಬೇಡಿಕೆ ಹೆಚ್ಚುವುದಕ್ಕೆ ಇಂಥ ಅಂಶಗಳೇ ಮುಖ್ಯ ಕಾರಣಬಾಗಿವೆ.

ನಗರದ ಬೊಮ್ಮನ ಹಳ್ಳಿಯ ಸರ್ಕಾರಿ ಶಾಲೆಯ ಮಕ್ಕಳಿಗೆ ವಾರದಲ್ಲಿ ಐದು ದಿನ ಬೆಳಿಗ್ಗೆ 11 ಘಂಟೆಯಿಂದ ಮಧ್ಯಾಹ್ನದ ಊಟದ ಬೆಲ್ ಬಾರಿಸುವವರೆಗೂ ಇಂಗ್ಲಿಷ್ ಪಾಠ ನಡೆಯುತ್ತದೆ. ಕಥೆಯನ್ನು ಹೇಳುವ ಮೂಲಕ ಅಕ್ಷರಗಳನ್ನು ಪರಿಚಯಿಸಲಾಗುತ್ತದೆ. ಇವರಿಗೆ ಪಾಠ ಮಾಡುವವರೆಲ್ಲರೂ ಗೃಹಿಣಿಯರು, ಮತ್ತೆ ಕೆಲವರು ಉದ್ಯೋಗಿಗಳೂ ಹೌದು. ಯಾರೂ ತರಬೇತಿ ಹೊಂದಿದ ಶಿಕ್ಷಕರಲ್ಲ ಆದರೆ ಆಶಾ ಇನ್ಫಿನೈಟ್ ಸಂಸ್ಥೆ ಇವರಿಗೆ ತರಬೇತಿ ನೀಡಿ ಅಗತ್ಯವಿರುವ ಲೆಸನ್ ಪ್ಲಾನ್, ಅದಕ್ಕೆ ಬೇಕಾದ ಪ್ಲ ಕಾರ್ಡ್ಸ್, ಕಥೆಯನ್ನು ವಿವರಿಸುವ ಚಾರ್ಟ್, ಎಲ್ಲವನ್ನೂ ಒದಗಿಸುತ್ತದೆ. ಯಾವುದೇ ಖಾಸಗಿ ಶಾಲೆಯಲ್ಲಿ ನೀಡುವ ಶಿಕ್ಷಣಕ್ಕಿಂತ ಉತ್ತಮವಾಗಿರುತ್ತದೆ. ಈ ನಿಟ್ಟಿನಲ್ಲಿ ಆಶಾ ಇನ್ಫಿನೈಟ್ ಸಂಸ್ಥೆಯು ಒಳ್ಳೆಯ ಕೆಲಸ ಮಾಡುತ್ತಿದೆ.

ಎಲ್ಲವೂ ಶಿಸ್ತು ಬದ್ಧವಾಗಿ ನಡೆಯುತ್ತದೆ. ಪ್ರತಿಯೊಂದು ತರಗತಿಗೂ ಒಂದು ಹೆಸರನ್ನು